**ದಿನಾಂಕಃ 25.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ವಾ**ದಿ ಪರ** ಶ್ರೀ ಎಂ ಡಿ **ವಕೀಲರಿಂದಃ**

ನಾನು 2006 ರಿಂದ ಪತ್ರ ಬರಹಗಾರರಾಗಿ ಕೆಲಸ ಮಾಡುತ್ತಿದ್ದೇನೆ. ಪತ್ರ ಬರಹಗಾರರಾಗಿ ನನ್ನ ಹೆಸರನ್ನು ನೊಂದಣಿ ಮಾಡಿಸಿಕೊಂಡಿರುತ್ತೇನೆ. 2006 ಕ್ಕಿಂತ ಪೂರ್ವದಲ್ಲಿ ನಾನು ತಾಲ್ಲೂಕು ಕಛೇರಿ ಬಳಿ ಅರ್ಜಿ ಬರೆದುಕೊಂಡು ಛಾಪಾ ಕಾಗದಗಳನ್ನು ಮಾರಾಟ ಮಾಡಿಕೊಂಡು ಇದ್ದೆನು. ನಾನು ಪಿಯುಸಿ ವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಮೂಲತಃ ಮಂಡ್ಯ ಜಿಲ್ಲೆಯವನು. ನಾನು 1989 ರಲ್ಲಿ ಟಿ.ನರಸೀಪುರಕ್ಕೆ ಬಂದು ನೆಲೆಸಿರುತ್ತೇನೆ. ಮಲ್ಲಪ್ಪರವರು ಮತ್ತು ಅವರ ಕುಟುಂಬದವರು ನನಗೆ ಪರಿಚಯವಿರುವುದಿಲ್ಲ. ಮಲ್ಲಪ್ಪರವರು ಒಬ್ಬರೇ ತಾಲ್ಲೂಕು ಕಛೇರಿಯ ಬಳಿ ಬಂದು ನನ್ನನ್ನು ಭೇಟಿ ಮಾಡಿರುತ್ತಾರೆ. ನನಗೆ ಸೇರಿದ ಪ್ರತ್ಯೇಕ ಪತ್ರ ಬರಹಗಾರರ ಕಛೇರಿ ಇರುವುದಿಲ್ಲ. ನಾನು ನಿಡಿ-2 ರ ಪತ್ರವನ್ನು ತಾಲ್ಲೂಕು ಕಛೇರಿಯ ಹೊರಗಡೆ ಇರುವ ಕಂಪ್ಯೂಟರ್ ಸೆಂಟರ್ ನಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ಸದರಿ ಕಂಪ್ಯೂಟರ್ ಸೆಂಟರ್ ನ ಮಾಲೀಕರು ಸುರೇಶ್ ಆಗಿರುತ್ತಾರೆ. ಸದರಿ ಸುರೇಶ್ ರವರು ಸಹ ಪತ್ರ ಬರಹಗಾರರು ಎಂದರೆ ಸರಿ. ಸದರಿ ಮರಣ ಶಾಸನ ಪತ್ರವನ್ನು ನಾನೇ ಮಾಹಿತಿ ನೀಡಿ ಸುರೇಶ್ ರವರ ಕಛೇರಿಯಲ್ಲಿದ್ದ ಹುಡುಗನ ಬಳಿ ಬೆರಳಚ್ಚು ಮಾಡಿಸಿರುತ್ತೇನೆ. ಸದರಿ ಸಂಧರ್ಭದಲ್ಲಿ ನಾನು ಬೆರಳಚ್ಚು ಮಾಡಿಸುವಾಗ ಮಲ್ಲಪ್ಪರವರನ್ನು ರಸ್ತೆಯ ಬಳಿ ಇದ್ದ ಮರದ ಕೆಳಗೆ ಕೂರಿಸಿದ್ದೆನು. ಸಾಕ್ಷಿದಾರರು ಮುಂದುವರೆದು ನಾನು ಮಲ್ಲಪ್ಪರವರಿಂದ ಮಾಹಿತಿಯನ್ನು ಪಡೆದುಕೊಂಡು ಸದರಿ ಮಾಹಿತಿಯ ಮೇರೆಗೆ ಮರಣ ಶಾಸನ ಪತ್ರವನ್ನು ಬೆರಳಚ್ಚು ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಮಲ್ಲಪ್ಪರವರು ನೀಡಿದ ಮಾಹಿತಿಯನ್ನು ನಾನು ಒಂದು ಸಣ್ಣ ಚೀಟಿಯಲ್ಲಿ ಬರೆದುಕೊಂಡು ನಂತರ ಬೆರಳಚ್ಚು ಮಾಡಿಸಿರುತ್ತೇನೆ. ಸಾಕ್ಷಿದಾರರು ಮುಂದುವರೆದು ಮರಣ ಶಾಸನ ಪತ್ರವನ್ನು ಬೆರಳಚ್ಚು ಮಾಡಿಸಿದ ನಂತರ ಸದರಿ ಪತ್ರದ ಎಲ್ಲಾ ಒಕ್ಕಣೆಗಳನ್ನು ನಾನು ಮಲ್ಲಪ್ಪರವರಿಗೆ ಓದಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಮರಣ ಶಾಸನ ಪತ್ರದ ಒಕ್ಕಣೆಗಳನ್ನು ಮಲ್ಲಪ್ಪರವರಿಗೆ ಓದಿ ಹೇಳುವಾಗ ಬೇರೆ ಯಾರು ಹಾಜರಿರಲಿಲ್ಲ. ಮಲ್ಲಪ್ಪರವರು ಸದರಿ ಮರಣ ಶಾಸನ ಪತ್ರಕ್ಕೆ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಹೆಬ್ಬೆಟ್ಟು ಮತ್ತು ಸಹಿಯನ್ನು ಮಾಡಿರುತ್ತಾರೆ. ಸಹದೇವ ಮತ್ತು ಮಹದೇವಸ್ವಾಮಿ ಎಂಬ ಸಾಕ್ಷಿದಾರರನ್ನು ಮಲ್ಲಪ್ಪರವರು

ಉಪ ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದಿದ್ದರು. ನಾನು ಉಪ ನೊಂದಣಾಧಿಕಾರಿಗಳ ಕಛೇರಿಗೆ ಹೋದ ನಂತರ ಮಹದೇವಸ್ವಾಮಿ ಮತ್ತು ಸಹದೇವರವರು ಸದರಿ ಕಛೇರಿಗೆ ಬಂದಿರುತ್ತಾರೆ. ಮಲ್ಲಪ್ಪರವರು ಮರಣ ಶಾಸನ ಪತ್ರ ತಯಾರಿಸಲು ನನಗೆ ಮಾಹಿತಿ ನೀಡುವಾಗ, ನಾನು ಸದರಿ ಮರಣ ಶಾಸನ ಪತ್ರವನ್ನು ಬೆರಳಚ್ಚು ಮಾಡಿಸುವಾಗ ಮತ್ತು ನಾನು ಸದರಿ ಮರಣ ಶಾಸನ ಪತ್ರದ ಒಕ್ಕಣೆಗಳನ್ನು ಮಲ್ಲಪ್ಪರವರಿಗೆ ಓದಿ ಹೇಳಿದಾಗ ಮಹದೇವಸ್ವಾಮಿ ಮತ್ತು ಸಹದೇವರವರು ಹಾಜರಿರಲಿಲ್ಲ.

ನಾನು ಯಾವುದೇ ಪತ್ರಗಳನ್ನು ಬರೆದು ನೊಂದಣಿ ಮಾಡಿಸಿದರೆ ಸದರಿ ಮಾಹಿತಿಯನ್ನು ನನ್ನ ಪುಸ್ತಕದಲ್ಲಿ ನಮೂದು ಮಾಡುತ್ತೇನೆ. ಸದರಿ ಪುಸ್ತಕವನ್ನು ನಾನು ಪ್ರತಿ ವರ್ಷ ಬದಲಾಯಿಸುತ್ತೇನೆ. ನನಗೆ ನ್ಯಾಯಾಲಯದಿಂದ ನೋಟೀಸ್ ಬಂದಿದ್ದರಿಂದ ನಾನು ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾರು ಮಾಹಿತಿ ನೀಡಿ ತಯಾರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಹೇಳಿಕೆಯ ಮೇರೆಗೆ ನಿಪಿ-2 ರ ಮರಣ ಶಾಸನ ಪತ್ರವನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮಲ್ಲಪ್ಪರವರಿಗೆ 80 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸದರಿ ಮಲ್ಲಪ್ಪರವರಿಗೆ ಅಸ್ತಮಾ ಮತ್ತು ಹೃದಯ ಸಂಬಂಧಿ ಖಾಯಿಲೆಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಲ್ಲಪ್ಪರವರಿಗೆ ವಯಸ್ಸಾಗಿದ್ದುದ್ದರಿಂದ ಬೇರೆಯವರ ಸಹಾಯವಿಲ್ಲದೇ ಮನೆಯ ಹೊರಗೆ ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಈ ದಾವೆಯ ಪ್ರತಿವಾದಿಯು ಮೊದಲಿನಿಂದಲೂ ಸ್ನೇಹಿತರು ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯು ಸ್ನೇಹಿತರಾಗಿರುವುದರಿಂದ ನಾವಿಬ್ಬರೂ ಶಾಮೀಲಾಗಿ ನಿಡಿ-2 ರ ದಾಖಲಾತಿಯನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಮಲ್ಲಪ್ಪರವರಿಗೆ ವಯಸ್ಸಾಗಿದ್ದುದ್ದರಿಂದ ಮತ್ತು ಖಾಯಿಲೆಯಿಂದ ಬಳಲುತ್ತಿದ್ದುದ್ದರಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ಸಮರ್ಥರಿರಲಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ಪ್ರತಿವಾದಿಯು ಸ್ನೇಹಿತರಾಗಿರುವುದರಿಂದ ಇಬ್ಬರೂ ಶಾಮೀಲಾಗಿ ದಾವಾ ಅನುಸೂಚಿ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ನಿಡಿ-2 ರ ಮರಣ ಶಾಸನ ಪತ್ರವನ್ನು ಸೃಷ್ಟಿ

ಮಾಡಿದ್ದೇವೆ ಎಂದರೆ ಸರಿಯಲ್ಲ. ಮಲ್ಲಪ್ಪರವರು ಉಪ ನೊಂದಣಾಧಿಕಾರಿಗಳ ಕಛೇರಿಗೆ ಬಂದಿಲ್ಲ ಮತ್ತು ಯಾವುದೇ ಮರಣ ಶಾಸನ ಪತ್ರವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಮಲ್ಲಪ್ಪರವರ ಸಮಕ್ಷಮ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ